NURSING

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕೆ.ಜಿ.ಎಫ್. ನ ಜಾಯಿಂಟ್ ಡೆವಲಪ್‌ಮೆಂಟ್ ಅಂಡ್ ಬೆನವಲೆಂಟ್ ಟ್ರಸ್ಟಿನ ವಿನಾಯಕ ನರ್ಸಿಂಗ್ ಶಾಲೆಗೆ ಮಾನ್ಯತೆ.

**ಓದಲಾಗಿದೆ:** ದಿನಾಂಕ 12-01-2004 ಸಂಖ್ಯೆ:ಕರಾಶುಪ:1527/2003ರ ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ತಿನ ರಿಜಿಸ್ಟ್ರಾರ್‌ರವರ ಪತ್ರ.

**ಪ್ರಸ್ತಾವನೆ:**

1) 1961ರ ಕರ್ನಾಟಕ ನರ್ಸಸ್, ಮಿಡ್ ವೈಫ್ ಅಂಡ್ ಹೆಲ್ತ್ ವಿಸಿಟರ್ಸ್ ಅಧಿನಿಯಮದ 23ನೇ ಪ್ರಕರಣದೊಂದಿಗೆ ಓದಲಾದ ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ತಿನ ಬೈಲಾದ 50ನೇ ನಿಯಮದಡಿ ಮಂಡ್ಯದ ಎಸ್.ಡಿ.ಜಯರಾಮ್ ಇಂಟಗ್ರೇಟೆಡ್ ರೂರಲ್ ಡೆವಲಪ್‌ಮೆಂಟ್ ಫೌಂಡೇಶನ್ ನವರು ನರ್ಸಿಂಗ್ ಶಾಲೆಗಾಗಿ ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ತಿಗೆ ಅರ್ಜಿ ಸಲ್ಲಿಸಿತ್ತು. ಸದರಿ 23ನೇ ಪ್ರಕರಣದಡಿ ಪರಿವೀಕ್ಷಣಾ ಸಮಿತಿಯನ್ನು ರಚಿಸಿ ಶಾಲೆಯನ್ನು ಪರಿವೀಕ್ಷಣೆಗೆ ಗುರಿಪಡಿಸಿ ಅದರ ವರದಿಯನ್ನು ಪಡೆದು, ಪ್ರಕರಣವನ್ನು ಪರಿಶೀಲಿಸಿ ಮೇಲೆ ಓದಲಾದ ಪತ್ರದನ್ವಯ ಕರ್ನಾಟಕ ರಾಜ್ಯ ಶುಶ್ರೂಷಾ ಪರಿಷತ್ತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ.

2) ಸರ್ಕಾರವು ಇದನ್ನು ಪರಿಶೀಲಿಸಿ ಡಿಪ್ಲೋಮೋ-ಇನ್-ನರ್ಸಿಂಗ್ ಕೋರ್ಸಿನೊಂದಿಗೆ ಮಂಡ್ಯದ ಎಸ್.ಡಿ.ಜಯರಾಮ್ ಇಂಟಗ್ರೇಟೆಡ್ ರೂರಲ್ ಡೆವಲಪ್‌ಮೆಂಟ್ ಫೌಂಡೇಶನ್‌ಗೆ 2005-06ನೇ ಸಾಲಿನಿಂದ ಜಾರಿಗೆ ಬರುವಂತೆ ಕೆಲವು ಷರತ್ತುಗಳಿಗೊಳಪಡಿಸಿ ನರ್ಸಿಂಗ್ ಶಾಲೆಯನ್ನು ಪ್ರಾರಂಭಿಸಲು ಮಂಜೂರಾತಿ ನೀಡಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

### ಸರ್ಕಾರದ ಆದೇಶ ಸಂಖ್ಯೆ: ಆಕುಕ 254 ಎಂಎಂಇ 2005, ಬೆಂಗಳೂರು, ದಿನಾಂಕ 22-07-2006

4) 1961ರ ಕರ್ನಾಟಕ ನರ್ಸಸ್, ಮಿಡ್ ವೈವ್ಸ್ ಅಂಡ್ ಹೆಲ್ಸ್ ವಿಸಿಟರ್ಸ್ ಅಧಿನಿಯಮದ 23ನೇ ಪ್ರಕರಣದೊಂದಿಗೆ ಓದಲಾದ ಕರ್ನಾಟಕ ರಾಜ್ಯ ನರ್ಸಿಂಗ್ ಪರಿಷತ್ತಿನ ಬೈಲಾದ 50ನೇ ನಿಯಮದ ರೀತ್ಯಾ ಮಾಡಲಾಗಿರುವ ಶಿಫಾರಸ್ಸನ್ನು ಆಧರಿಸಿ 40 (ನಲವತ್ತು) ವಿದ್ಯಾರ್ಥಿಗಳ ಪ್ರವೇಶ ಮಿತಿಯ ಡಿಪ್ಲೋಮೋ-ಇನ್-ನರ್ಸಿಂಗ್ ಕೋರ್ಸ್‌ನೊಂದಿಗೆ ಕೆ.ಜಿ.ಎಫ್. ನ ಜಾಯಿಂಟ್ ಡೆವಲಪ್‌ಮೆಂಟ್ ಅಂಡ್ ಬೆನವಲೆಂಟ್ ಟ್ರಸ್ಟಿನ ವಿನಾಯಕ ನರ್ಸಿಂಗ್ ಶಾಲೆಗೆ ಮಾನ್ಯತೆ ಮತ್ತು ಅನುಮೋದನೆಯನ್ನು 2005-2006ನೇ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುವಂತೆ ನೀಡಲಾಗಿದೆ. ಈ ಮಂಜೂರಾತಿಯು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ.

#### ಷರತ್ತುಗಳು

(1) ಕರ್ನಾಟಕ ರಾಜ್ಯ ನರ್ಸಿಂಗ್ ಪರಿಷತ್ತಿನ ಹಾಗೂ ಭಾರತೀಯ ನರ್ಸಿಂಗ್ ಪರಿಷತ್ತಿನ ಮಾನ್ಯತೆ ಮತ್ತು ಅನುಮೋದನೆಯನ್ನು ಪಡೆಯತಕ್ಕದ್ದು.

(2) ಭಾರತೀಯ ಶುಶ್ರೂಷ ಪರಿಷತ್ತು ಹಾಗೂ ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ತಿನವರು ನಿಗದಿಪಡಿಸಿರುವ ಪಠ್ಯಕ್ರಮ ಮತ್ತು ಮಿಡ್‌ವೈವ್ಸ್ ಹಾಗೂ ಶುಶ್ರೂಷ ಪರೀಕ್ಷಾ ಮಂಡಳಿಯ ಕಾರ್ಯ ಯೋಜನೆಗಳನ್ನು ಪಾಲಿಸತಕ್ಕದ್ದು.

(3) ಭಾರತೀಯ ಶುಶ್ರೂಷ ಪರಿಷತ್ತಿನ ಅನುಮೋದನೆಯನ್ನು 1947ರ ಭಾರತೀಯ ಶುಶ್ರೂಷ ಪರಿಷತ್ತಿನ ಅಧಿನಿಯಮದ 13ನೇ ಪ್ರಕರಣದಡಿ ಪಡೆದ ನಂತರವೇ ವಿದ್ಯಾರ್ಥಿಗಳ ಪ್ರವೇಶ ಮಾಡಿಕೊಳ್ಳತಕ್ಕದ್ದು. ಯಾವುದೇ ಕಾರಣಕ್ಕೂ ಹೆಚ್ಚುವರಿ ವಿದ್ಯಾರ್ಥಿ ಪ್ರವೇಶ ಪಡೆಯತಕ್ಕದಲ್ಲ.

(4) ಕರ್ನಾಟಕ ರಾಜ್ಯ ಶುಶ್ರೂಷಾ ಪರಿಷತ್ತಿನವರು ಮತ್ತು ಭಾರತೀಯ ಶುಶ್ರೂಷ ಪರಿಷತ್ತಿನವರು ನಿಗದಿಪಡಿಸಿರುವ ನಿಯಮಗಳು ಮತ್ತು ಪರಿನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

(5) ಭಾರತೀಯ ಶುಶ್ರೂಷ ಪರಿಷತ್ತು ಮತ್ತು ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ತಿನ ಮಾರ್ಗಸೂಚಿಯನ್ವಯ ಮೂಲಭೂತ ಸೌಲಭ್ಯಗಳನ್ನು ಹೊಂದತಕ್ಕದ್ದು.

(6) ಈ ಸಂಸ್ಥೆಗಳಿಗೆ ಯಾವುದೇ ಕಾರಣಕ್ಕೂ ಸರ್ಕಾರದಿಂದ ಅನುದಾನ ಅಥವಾ ಹಣದ ಸಹಾಯ ನೀಡಲಾಗುವುದಿಲ್ಲ.

(7) ಭಾರತೀಯ ಶುಶ್ರೂಷ ಪರಿಷತ್ತಿನ ನಿರ್ಣಯದಂತೆ 2010ನೇ ಇಸವಿಯ ಒಳಗಾಗಿ ನರ್ಸಿಂಗ್ ಶಾಲೆಯನ್ನು ನರ್ಸಿಂಗ್ ಕಾಲೇಜನ್ನಾಗಿ ಮೇಲ್ದರ್ಜೆಗೇರಿಸಲು ಸಂಸ್ಥೆಯು ಠರಾವನ್ನು ಹೊರಡಿಸಿ ಭಾರತೀಯ ಶುಶ್ರೂಷ ಪರಿಷತ್ತಿನ ನಿಯಮಗಳನ್ವಯ ನರ್ಸಿಂಗ್ ಕಾಲೇಜಿಗಾಗಿ ಅಗತ್ಯ ಸೌಲಭ್ಯಗಳನ್ನು ಹೊಂದತಕ್ಕದ್ದು.

(8) ಸಂಸ್ಥೆಯು ತಪಾಸಣಾ ತಂಡವು ವರದಿ ಮಾಡಿರುವ ನ್ಯೂನತೆಗಳನ್ನು ಎರಡು ವರ್ಷಗಳ ಒಳಗಾಗಿ ಸರಿಪಡಿಸಿಕೊಳ್ಳತಕ್ಕದ್ದು.

(9) ಸಂಸ್ಥೆಯು ಶಾಲೆಗಾಗಿ ಭಾರತೀಯ ಶುಶ್ರೂಷ ಪರಿಷತ್ತಿನ ನಾರ್ಮ್ಸ್‌ನ ಅನ್ವಯ ಸ್ವಂತ ಕಟ್ಟಡ ಮತ್ತು ಸ್ವಂತ ಆಸ್ಪತ್ರೆಯನ್ನು ಎರಡು ವರ್ಷಗಳೊಳಗಾಗಿ ಹೊಂದತಕ್ಕದ್ದು.

(10) ಸಂಸ್ಥೆಯು ಯಾವುದೇ ಕಾರಣಕ್ಕೂ ಶಾಲೆಯನ್ನು ಬೇರೆ ಸಂಸ್ಥೆಗೆ ವರ್ಗಾಯಿಸತಕ್ಕದ್ದಲ್ಲ.

(11) 2003ರ ಕರ್ನಾಟಕ ಡಿಪ್ಲೋಮೋ-ಇನ್-ಜನರಲ್ ನರ್ಸಿಂಗ್ ಮಿಡ್ ವೈಫರಿ/ ಸೈಕಿಯಾಟ್ರಿ ಕೋರ್ಸುಗಳ ಪ್ರವೇಶಕ್ಕೆ ಅಭ್ಯರ್ಥಿಗಳ ಆಯ್ಕೆ ನಿಯಮಾವಳಿಯ ಉಪಬಂಧಗಳ ಅನುಸಾರವೇ ಅಥವಾ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಪ್ರವೇಶ ನಿಯಮಾವಳಿಯ ಉಪಬಂಧಗಳ ಅನುಸಾರವೇ ಅಭ್ಯರ್ಥಿಗಳ ಪ್ರವೇಶವನ್ನು ಪಡೆಯತಕ್ಕದ್ದು.

(12) ಮೇಲ್ಕಂಡ ಯಾವುದೇ ಷರತ್ತುಗಳನ್ನು ಸಂಸ್ಥೆಯು ಉಲ್ಲಂಘಿಸಿದ್ದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಡಿ.ಬಿ.ಗಣಾಚಾರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
(ವೈದ್ಯಕೀಯ ಶಿಕ್ಷಣ)

<u>ಇವರಿಗೆ:</u>

1) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕರು, ಆನಂದರಾವ್ ವೃತ್ತ, ಬೆಂಗಳೂರು-560009.
2) ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಆನಂದರಾವ್ ವೃತ್ತ, ಬೆಂಗಳೂರು-09.
3) ರಿಜಿಸ್ಟ್ರಾರ್, ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ತು, ಸೂರ್ಯ ಅಪಾರ್ಟ್‌ಮೆಂಟ್ಸ್ ನಂ.71, 6ನೇ ಎ ಕ್ರಾಸ್, ಆನಂದ್‌ರಾವ್ ಬಡಾವಣೆ, ಗಾಂಧಿನಗರ, ಬೆಂಗಳೂರು-09.
4) ಕಾರ್ಯದರ್ಶಿ, ಕರ್ನಾಟಕ ರಾಜ್ಯ ಶುಶ್ರೂಷಾ ಪರೀಕ್ಷಾ ಮಂಡಳಿ, ಬೆಂಗಳೂರು-09.
5) ಅಧ್ಯಕ್ಷರು/ಕಾರ್ಯದರ್ಶಿ, ಜಾಯಿಂಟ್ ಡೆವಲಪ್‌ಮೆಂಟ್ ಅಂಡ್ ಬೆನವಲೆಂಟ್ ಟ್ರಸ್ಟ್, ಮೈನ್ಸ್ ಶಾಲೆಯ ಹತ್ತಿರ, ಸೆಂಟ್ ಜಾನ್ಸ್ ಚರ್ಚ್ ಹಿಂಭಾಗ, ಕೋರಮಂಡಲ್ ಅಂಚೆ, ಕೆ.ಜಿ.ಎಫ್., ಕೋಲಾರ ಜಿಲ್ಲೆ.
6) ಪ್ರಾಂಶುಪಾಲರು, ವಿನಾಯಕ ನರ್ಸಿಂಗ್ ಶಾಲೆ, ಮೈನ್ಸ್ ಶಾಲೆಯ ಹತ್ತಿರ, ಸೆಂಟ್ ಜಾನ್ಸ್ ಚರ್ಚ್ ಹಿಂಭಾಗ, ಕೋರಮಂಡಲ್ ಅಂಚೆ, ಕೆ.ಜಿ.ಎಫ್., ಕೋಲಾರ ಜಿಲ್ಲೆ.
7) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು